ಇವತ್ತು ಸೇನಾಪತಿಹಳ್ಳಿ, ಗಾಣಿಗನಕೊಪ್ಪಲು ಮತ್ತು ಕಂಚನಹಳ್ಳಿ- ಈ ಮೂರು ಊರುಗಳಿಗೆ ಮಾತ್ರ ಹೋಗಬೇಕು. ಏಕೆಂದರೆ ಈ ಮೂರು ಊರುಗಳು ಅಕ್ಕಪಕ್ಕದಲ್ಲಿಯೇ ಇವೆ. ಅತ್ತಹಳ್ಳಿ ಬೇವಿನಹಳ್ಳಿ ಕಡೆ ಹೋಗಬಾರದು. ಹೋದರೆ ಮಧ್ಯಾಹ್ನಕ್ಕಿಂತ ಮುಂಚೆ ಹಿಂತಿರುಗಿ ಬರುವುದಕ್ಕೆ ಆಗುವುದಿಲ್ಲ. ಇಪ್ಪಾತ್ನಾಲ್ಕರ ಅಂಚಿನಲ್ಲಿರುವ ಸಲೀಂ, ಸೈಕಲ್‌ನ ಚಕ್ರಗಳಿಗೆ ಮನೆಯಲ್ಲಿರುವ ಪಂಪ್‌ನಿಂದ ಬ್ಲೋ ತುಂಬುತ್ತಾ ಯೋಚಿಸಿದ.

ಸಲೀಂನ ಕಸುಬು ದನಗಳಿಗೆ ಲಾಳ ಕಟ್ಟುವುದು. ಇದು ಅವನ ಹಿರಿಯರಿಂದ ಬಂದಿದ್ದು. ಅವನ ಊರು ಎಮ್ಮೆಕೊಪ್ಪಲು. ಬೆಳಿಗ್ಗೆ ಹಳ್ಳಿಗಳ ಮೇಲೆ ಹೋಗುತ್ತಾನೆ, ಮಧ್ಯಾಹ್ನ ಊರಿಗೆ ಹಿಂತಿರುಗಿ ಬಿಡುತ್ತಾನೆ.

ಸಲೀಂಗಿಂತ ಎರಡು ವರ್ಷ ಹಿರಿಯವನಾದ ಕಲೀಂ ಸಹ ಇದೇ ಕಸುಬು ಮಾಡಿಕೊಂಡಿದ್ದಾನೆ. ಇವರಿಗೆ ಒಬ್ಬಳು ತಂಗಿ ಶಕೀಲಾ. ಮನೆಯಲ್ಲಿ ಅಪ್ಪ, ಅಮ್ಮ ಇದ್ದಾರೆ. ಕಲೀಂ, ಸಲೀಂ, ಶಕೀಲಾ ಇವರಲ್ಲಿ ಯಾರಿಗೂ ಮದುವೆಯಾಗಲಿಲ್ಲ. ಶಕೀಲಾಳ ಮದುವೆ ಆಗಿ ಹೋಗಲಿ, ಆಮೇಲೆ ಕಲೀಂ ಮದುವೆ ಬಗ್ಗೆ ವಿಚಾರ ಮಾಡೋಣವೆಂಬುದು ಎಲ್ಲರ ಲೆಕ್ಕಾಚಾರ.

ಎರಡು ತಿಂಗಳಿಗೊಮ್ಮೆ ಲಾಳ ಕಟ್ಟಲೇಬೇಕಾಗುತ್ತದೆ. ಈ ಅವಧಿಯಲ್ಲಿ ಅವು ಸವೆದು ಹೋಗುತ್ತೆ. ಕೆಸರುಗದ್ದೆ ಕೆಲಸ ಪ್ರಾರಂಭವಾದರೆ ಲಾಳ ಕಟ್ಟುವವರಿಗೆ ಬಿಡುವಿರುವುದಿಲ್ಲ.

* * *

ಇಂದು ಸಲೀಂ ಹಳ್ಳಿಗಳಿಂದ ಬೇಗ ಬಂದು ಬಿಡಲು ಯಾಕೆ ಯೋಚಿಸುತ್ತಿದ್ದನೆಂದರೆ ಅರಕೆರೆ ಕಡೆಯವರು ಶಕೀಲಾಳನ್ನು ನೋಡಲು ಬರುತ್ತಿದ್ದಾರೆ. ವರನ ಹೆಸರು ರಸೂಲ್ ಎಂದು. 'ರಸೂಲ್ ಚಿಕ್ಕ ಲಗೇಜು ಆಟೋ ಇಟ್ಟುಕೊಂಡು, ಮೈಸೂರಿನಿಂದ ತರಕಾರಿ ತಂದು ಹಳ್ಳಿಗಳ ಮೇಲೆ ವ್ಯಾಪಾರ ಮಾಡುತ್ತಾನೆ, ಸ್ವಂತ ಮನೆಯಿದೆ. ಮನೆಯಲ್ಲಿ ಅಣ್ಣ- ತಮ್ಮ ಮಾತ್ರ ಇರುವುದು, ಅಣ್ಣನಿಗೆ ಮದುವೆಯಾಗಿದೆ...' ಇಷ್ಟೆಲ್ಲ ವಿವರವನ್ನು ಮಧ್ಯಸ್ಥಿಕೆ ವಹಿಸಿರುವವರು ಹೇಳಿದ್ದರು.

ವರನ ಕಡೆಯವರು ಬಂದು ಶಕೀಲಾಳನ್ನು ನೋಡಿ ಪಸಂದ್ ಮಾಡಿ, ಅವಳ ಕೈಗೆ ನೂರು ರೂಪಾಯಿ ಕೊಟ್ಟರು.

ಶಕೀಲಾ ಮದುವೆ ರಸೂಲ್‌ನೊಂದಿಗೆ ಆಯಿತು. ಮದುವೆ ದಿನ ಮದುವೆ ಹೆಣ್ಣಿಗೆ ವಿದಾಯ ಮಾಡುವಾಗ ಸಲೀಂ ಎಷ್ಟೊಂದು ಅಳುತ್ತಿದ್ದನೆಂದರೆ ಮನೆ ಮಂದಿಯಲ್ಲದೇ ಮದುವೆಗೆ ಬಂದ ನೆಂಟರೂ ಸಮಾಧಾನ ಮಾಡಿದರು. 'ತಂಗಿಯನ್ನು ನೋಡಬೇಕೆನಿಸಿದಾಗ ಅವಳ ಊರಿಗೆ ಹೋಗು. ಅರಕೆರೆ ಏನು ದೂರವಿಲ್ಲ, ಹತ್ತು ಕಿಲೋಮೀಟರ್ ಅಷ್ಟೇ. ಅವಳು ಹೊಸ ಜೀವನಕ್ಕೆ ಕಾಲಿಡುತ್ತಿರುವಾಗ ಅವಳ ದಾಂಪತ್ಯ ಜೀವನ ಚೆನ್ನಾಗಿರಲೆಂದು ಹಾರೈಸು' ಎಂದರು.

ಮದುವೆ ಮುಗಿದ ಮೇಲೆ ಶಕೀಲಾ ಗಂಡನ ಮನೆಗೆ ಹೋದಳು. ಗಂಡನ ಮನೆಯಲ್ಲಿ ಅವಳು ಸುಖವಾಗಿದ್ದರೆ ಸಾಕೆಂದು ಎಲ್ಲರ ಆಸೆಯಾಗಿತ್ತು. ಮದುವೆಯಾದ ಹತ್ತು ದಿನ ಬಳಿಕ ಶಕೀಲಾ ಗಂಡನೊಂದಿಗೆ ಮೊದಲ ಬಾರಿ ತವರಿಗೆ ಬಂದಳು. ಅವಳು ಸುಖವಾಗಿರುವುದನ್ನು ಕಂಡು ಎಲ್ಲರೂ ಸಂತೋಷಪಟ್ಟರು.

ಸಲೀಂಗೆ ಬಿಡುವು ಸಿಕ್ಕಿದಾಗಲೆಲ್ಲ ದರ್ಗಾಕ್ಕೆ (ಅಗಲಿ ಹೋದ ಧರ್ಮಗುರುಗಳ ಸಮಾಧಿ) ಹೋಗುತ್ತಿದ್ದ. ಅವನು ಹೆಚ್ಚಾಗಿ ತನ್ನ ಊರಿನ ಸಮೀಪವೇ ಇರುವ ದೇಶವಳ್ಳಿ ದರ್ಗಾಕ್ಕೆ ಹೋಗುತ್ತಿದ್ದ. ವರ್ಷಕ್ಕೊಮ್ಮೆ ನಡೆಯುವ ಉರುಸ್‌ಗೆ ತಪ್ಪದೇ ಭೇಟಿ ನೀಡಿ ರಾವತ್‌ನಲ್ಲಿ (ಅನ್ನ ಸಂತರ್ಪಣೆ) ಊಟ ಮುಗಿಸಿ ಇಡೀ ರಾತ್ರಿ ನಡೆಯುವ ಖವ್ವಾಲಿಗಳನ್ನು ಆಲಿಸಿ ಬರುತ್ತಿದ್ದ. ಹೀಗಾಗಿ ಅವನು ಅಲ್ಲಿರುವ ನಾಲ್ಕಾರು ಮುಜಾವರ್‌ಗಳೊಂದಿಗೆ (ದರ್ಗಾದ ಬಳಿ ಬೀಡು ಬಿಟ್ಟಿರುವ, ಒಂದು ದೃಷ್ಟಿಯಿಂದ ನೋಡಿದರೆ ಮನೆ-ಮಠ ತ್ಯಾಗ ಮಾಡಿರುವ ಮಂದಿ) ಪರಿಚಯವಿತ್ತು.

ಶಕೀಲಾ ಮದುವೆ ಬಳಿಕ ಸಲೀಂ, ದೇಶವಳ್ಳಿಯ